**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/ಚು.ಸೌ.ಸ/ 02/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ: 27.07.2013

**ವಿಷಯ:-** ಮಂಡ್ಯ ಲೋಕಸಭಾ ಸ್ಥಾನಕ್ಕೆ ಉಪಚುನಾವಣೆ ನಡೆಯುತ್ತಿರುವುದರಿಂದ ಸಹಕಾರ ಸಂಘಗಳ ಚುನಾವಣೆ ನಡೆಸಲು ದಿನಾಂಕಗಳನ್ನು ಮರುನಿಗಧಿಪಡಿಸುವ ಬಗ್ಗೆ.

**ಉಲ್ಲೇಖ:-** 01. ಆಯೋಗದ ಅಧಿಸೂಚನೆ ಸಂಖ್ಯೆ:ಸ.ಚು.ಆ/ಚುನಾವಣೆ/22/2013-14, ದಿನಾಂಕ:03.07.2013

02. ಸಹಕಾರ ಸಂಘಗಳ ಉಪನಿಬಂಧಕರು , ಮಂಡ್ಯ ಮತ್ತು ರವರ ಪತ್ರ ದಿನಾಂಕ:27.07.2013

***

**ಪ್ರಸ್ಥಾವನೆ:-**

ಉಲ್ಲೇಖ 01 ರ ಅಧಿಸೂಚನೆಯಡಿ ವಿಷದೀಕರಿಸಿರುವಂತೆ ರಾಜ್ಯದ ವಿವಿಧ ಸಹಕಾರ ಸಂಘಗಳಿಗೆ ಚುನಾವಣೆ ನಡೆಸತಕ್ಕ ದಿನಾಂಕಗಳನ್ನು ನಿಗದಿಪಡಿಸಿ ಆದೇಶ ಹೊರಡಿಲಾಗಿತ್ತು. ಆದರೆ ಉಲ್ಲೇಖ 02 ರ ಪತ್ರದಲ್ಲಿ ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು, ಮಂಡ್ಯ ಇವರು ಮಂಡ್ಯ ಜಿಲ್ಲೆಯಲ್ಲಿ ಲೋಕಸಭಾ ಉಪ ಚುನಾವಣೆಗಳು ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ ಸಹಕಾರ ಸಂಘಗಳ ಚುನಾವಣೆಗೆ ತೊಡಕಾಗದಂತೆ ದಿನಾಂಕಗಳನ್ನು ಈ ಹಿನ್ನೆಲೆಯಲ್ಲಿ ಮರು ನಿಗದಿಪಡಿಸಿ ಕೋರಿದ್ದರ ಮೇರೆಗೆ ಈ ಆದೇಶ.

**ಆದೇಶ**

ಮಂಡ್ಯ ಜಿಲ್ಲೆಯಲ್ಲಿ ಲೋಕಸಭಾ ಸ್ಥಾನಕ್ಕೆ ಉಪ ಚುನಾವಣೆ ಘೋಷಣೆಯಾಗಿರುವುದರಿಂದ ಈಗಾಗಲೇ ನಿಗದಿಪಡಿಸಲಾಗಿದ್ದ ಚುನಾವಣಾ ದಿನಾಂಕಗಳನ್ನು ಮಂಡ್ಯ ಜಿಲ್ಲೆಯ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ದಿನಾಂಕಗಳನ್ನು ಉಪನಿಬಂಧಕರ ಕೋರಿಕೆಯನ್ನು ಪರಿಗಣಿಸಿ ಕೆಳಕಂಡಂತೆ ಮಾರ್ಪಡಿಸಿ ಅದರಂತೆ ಅಧಿಸೂಚನೆ ಹೊರಡಿಸಲು ಮತ್ತು ನಿಯಮಾನುಸಾರ ಚುನಾವಣೆ ನಡೆಸಲು ಅಗತ್ಯ ಮುಂದಿನ ಕ್ರಮ ಕೈಗೊಳ್ಳಲು ಆದೇಶಿಸಿದೆ.

| ಪ್ರಾಥಮಿಕ ಸಹಕಾರ ಸಂಘಗಳು | ಚುನಾವಣೆ ನಡೆಸಬೇಕಾದ ದಿನಾಂಕ |
|---|---|
| ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು | 1-09-2013 |
| ಇತರೆ ಸಹಕಾರ ಸಂಘಗಳ (ಕೃಷಿಯೇತರ ಪತ್ತಿನ ಸಂಘಗಳು, ಬ್ಯಾಂಕುಗಳು ಮತ್ತು ಇತರೆ ಪತ್ತಿನ ಸಹಕಾರ ಸಂಘಗಳು. | |
| ಇತರೆ ಸಹಕಾರ ಸಂಘಗಳು (ಗ್ರಾಹಕರ ಸಂಘಗಳು ಇನ್ನಿತರೆ ಎಲ್ಲಾ ಪತ್ತೇತರ ಸಹಕಾರ ಸಂಘಗಳು/ಇತರೆ ಸಂಘಗಳು | |
| ಹಾಲು ಉತ್ಪಾದಕರ ಸಹಕಾರ ಸಂಘಗಳು | 07-09-2013 |

ತಮ್ಮ ವಿಶ್ವಾಸಿ,

(ಎನ್.ಸಿ ಮುನಿಯಪ್ಪ)
ಆಯುಕ್ತರು

**ಇವರಿಗೆ:**

1. ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ಚುನಾವಣಾಧಿಕಾರಿ, ಮಂಡ್ಯ.
2. ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ ಮತ್ತು ಬೆಂಗಳೂರು ಪ್ರಾಂತ.
3. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಡ್ಯ /ಪಾಂಡವಪುರ ಉಪವಿಭಾಗ.